## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 235 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 12.08.2025 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನ ಸಂಚಾರಕ್ಕೆ ಅನುಗುಣವಾಗಿ ನಾಗರಿಕ ಸೌಲಭ್ಯಗಳಾದ. ಬಸ್ ತಂಗುದಾಣ, ಶೌಚಾಲಯ, ಒದಗಿಸಲು ಕ್ರಮ ವಹಿಸಲಾಗಿದೆಯೇ: | ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನ ಸಂಚಾರಕ್ಕೆ ಅನುಗುಣವಾಗಿ ನಾಗರಿಕ ಸೌಲಭ್ಯಗಳಾದ, ಬಸ್ ತಂಗುದಾಣ, ಶೌಚಾಲಯಗಳನ್ನು ಸ್ವಚ್ಛ್ ಭಾರತ್ ಮಿಷನ್, 15ನೇ ಹಣಕಾಸು ಯೋಜನೆಯಡಿ ಹಾಗೂ ಸ್ಮಾರ್ಟ್ ಸಿಟಿ ಯೋಜನೆಯಡಿ ಒದಗಿಸಿದ್ದು ವಿವರಗಳು ಈ ಕೆಳಕಂಡಂತಿವೆ.<br>**ಸ್ವಚ್ಛ್ ಭಾರತ್ ಮಿಷನ್:**<br>ತುಮಕೂರು, ಶಿವಮೊಗ್ಗ, ಮೈಸೂರು, ದಾವಣಗೆರೆ, ವಿಜಯಪುರ, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ರಾಯಚೂರು, ಕಲಬುರಗಿ, ಬಳ್ಳಾರಿ ಹಾಗೂ ಮಂಗಳೂರು ಮಹಾನಗರ ಪಾಲಿಕೆಗಳಲ್ಲಿ ನಿರ್ವಹಿಸಲಾಗಿರುವ ಶೌಚಾಲಯಗಳ ವಿವರಗಳನ್ನು **ಅನುಬಂಧ-1ರಲ್ಲಿ** ನೀಡಿದೆ.<br>**15ನೇ ಹಣಕಾಸು ಯೋಜನೆ:**<br>ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನ ಸಂಚಾರಕ್ಕೆ ಅನುಗುಣವಾಗಿ ನಾಗರಿಕ ಸೌಲಭ್ಯಗಳಾದ, ಬಸ್ ತಂಗುದಾಣ ಒದಗಿಸಲು ಕೈಗೊಳ್ಳಲಾಗಿರುವ ಕ್ರಮಗಳ ಸವಿವರಗಳನ್ನು **ಅನುಬಂಧ-2ರಲ್ಲಿ** ನೀಡಿದೆ.<br>**ಸ್ಮಾರ್ಟ್ ಸಿಟಿ ಯೋಜನೆ:**<br>• ಸ್ಮಾರ್ಟ್ ಸಿಟಿ ಯೋಜನೆಯಡಿ ರಾಜ್ಯದ 7 ನಗರಗಳಾದ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಶಿವಮೊಗ್ಗ, ತುಮಕೂರು ಮತ್ತು ಬೆಂಗಳೂರು ನಗರಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆಗಳ ಅಭಿವೃದ್ಧಿ, ಉಧ್ಯಾನವಗಳ ಅಭಿವೃದ್ಧಿ, ಬಸ್ ನಿಲ್ದಾಣಗಳ ಅಭಿವೃದ್ಧಿ, ಸರ್ಕಾರಿ ಶಾಲೆಗಳ ಅಭಿವೃದ್ಧಿ, ಕೆರೆಗಳ ನವೀಕರಣ ಇನ್ನಿತರ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br>• ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಮಂಗಳೂರು ನಗರದಲ್ಲಿ ನಾಗರಿಕರ ಸೌಲಭ್ಯಕ್ಕಾಗಿ 20 ಬಸ್ ತಂಗುದಾಣ ಹಾಗೂ 3 ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ. |
| ಆ) | ಮಂಗಳೂರು ನಗರದಲ್ಲಿ ವಾಹನ ದಟ್ಟಣೆಗೆ ಅನುಗುಣವಾಗಿ ಪಾರ್ಕಿಂಗ್ ಪ್ರದೇಶಗಳನ್ನು ಗುರುತಿಸಲಾಗಿದೆಯೇ ನಗರದಲ್ಲಿ ಎಷ್ಟು ಸಾರ್ವಜನಿಕ ಶೌಚಾಲಯಗಳು ಎಷ್ಟು ಅಂತರದಲ್ಲಿವೆ ಮತ್ತು ಎಲ್ಲವೂ ಸಾರ್ವಜನಿಕರ ಉಪಯೋಗಕ್ಕೆ | **15ನೇ ಹಣಕಾಸು ಯೋಜನೆ:**<br>ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ 16 ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಲಾಗಿರುತ್ತದೆ. ಟೆಂಡರ್ ಕರೆಯಲಾಗಿದ್ದು 2 ಗುತ್ತಿದಾರರು ಭಾಗವಹಿಸಿದ್ದು ಇನ್ನುಳಿದ ಪಾರ್ಕಿಂಗ್ ಸ್ಥಳಗಳಿಗೆ ಮರು ಟೆಂಡರ್ ಕರೆಯಲು ಕ್ರಮಕೈಗೊಳ್ಳಲಾಗಿದೆ ಹಾಗೂ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ |

| | | |
|---|---|---|
| | ಮುಕ್ತವಾಗಿವೆಯೇ: | 60 ವರ್ಷಗಳಲ್ಲಿ ಒಟ್ಟು 40 ಸಾರ್ವಜನಿಕ ಶೌಚಾಲಯಗಳು ಕಾರ್ಯನಿರ್ವಹಿಸುತ್ತಿದ್ದು ಸಾರ್ವಜನಿಕ ಉಪಯೋಗಕ್ಕೆ ಮುಕ್ತವಾಗಿರುವ ಬಗ್ಗೆ ಅನುಬಂಧ-4ರಲ್ಲಿ ಒದಗಿಸಿದೆ.<br><br>**ಸ್ವಚ್ಛ ಭಾರತ್ ಮಿಷನ್:**<br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸಾರ್ವಜನಿಕ ಹಾಗೂ ಮಹತ್ವಾಕಾಂಕ್ಷೆ (Aspirational) ಶೌಚಾಲಯಗಳ ವಿವರಗಳನ್ನು ಹಾಗೂ ಅವುಗಳ ಅಂತರವನ್ನು **ಅನುಬಂಧ-3ರಲ್ಲಿ** ನೀಡಿದೆ.<br><br>**ಸ್ಮಾರ್ಟ್ ಸಿಟಿ ಯೋಜನೆ:**<br>• ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಪಿಪಿಪಿ ಮಾದರಿಯಡಿ ಮಂಗಳೂರು ನಗರದಲ್ಲಿ ಹಂಪನ ಕಟ್ಟೆ ಜಂಕ್ಷನ್ ಪ್ರದೇಶದಲ್ಲಿ ರೂ.79.05 ಕೋಟಿ ಮೊತ್ತದಲ್ಲಿ ಬಹುಮಹಡಿ ವಾಹನ ಪಾರ್ಕಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಈ ಕಟ್ಟಡದಲ್ಲಿ 400 ಕಾರ್‌ಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ.<br>• ಇದರ ಹೊರತಾಗಿ ಪ್ರಗತಿಯಲ್ಲಿರುವ ಕೇಂದ್ರ ಮಾರುಕಟ್ಟೆ ಅಭಿವೃದ್ಧಿ ಕಾಮಗಾರಿಯಲ್ಲಿ 700 ಕಾರ್‌ಗಳಿಗೆ ಪಾರ್ಕಿಂಗ್ ವ್ಯವಸ್ಥೆ ಯೋಜಿಸಲಾಗಿದೆ. ಪಾರ್ಕಿಂಗ್ ಪ್ರದೇಶಗಳ ಗುರುತಿಸುವಿಕೆ ಹಾಗೂ ಸಾರ್ವಜನಿಕ ಶೌಚಾಲಯಗಳ ನಿರ್ಮಾಣವನ್ನು ಮಹಾನಗರ ಪಾಲಿಕೆಯ ವತಿಯಿಂದ ನಿರ್ವಹಿಸಲಾಗುತ್ತಿದೆ. |
| ಇ) | ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿ ನಿರ್ಮಿಸಿದ ಬಸ್ ನಿಲ್ದಾಣಗಳು ಸಾರ್ವಜನಿಕ ಬಳಕೆಗೆ ಯೋಗ್ಯವಾಗಿಲ್ಲದಿರುವುದನ್ನು ಸರಿಪಡಿಸಲು ಮತ್ತು ಅಗತ್ಯವಿದ್ದಲ್ಲಿ ಸ್ಥಳಾಂತರಿಸಲು ಏನು ಕ್ರಮವಹಿಸಲಾಗಿದೆ: (ವಿವರ ನೀಡುವುದು) | • ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಮಂಗಳೂರು ನಗರದಲ್ಲಿ ರೂ.3.92 ಕೋಟಿ ಮೊತ್ತದಲ್ಲಿ 20 ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿದ್ದು, ಇವುಗಳನ್ನು ಮಾರ್ಚ್ 2020 ರಿಂದ ಸಾರ್ವಜನಿಕರ ಬಳಕಗೆ ಮುಕ್ತಗೊಳಿಸಲಾಗಿದೆ ಮತ್ತು ಇವುಗಳು ಸಮರ್ಪಕವಾಗಿ ಬಳಕೆಯಾಗುತ್ತಿದೆ.<br>• ಮಹಾನಗರ ಪಾಲಿಕೆಯಿಂದ ಸೂಚಿಸಲಾದ ಸ್ಥಳಗಳಲ್ಲಿ ಈ ಬಸ್ ತಂಗುದಾಣಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿರುತ್ತದೆ.<br>• ಬಸ್ ತಂಗುದಾಣಗಳ ಕಾಮಗಾರಿಗಳ ಅನುಷ್ಠಾನದ ಸಂದರ್ಭದಲ್ಲಿ ಪರಿಮಾಣ ಹಾಗೂ ಗುಣಮಟ್ಟವನ್ನು ಪ್ರತಿ ಹಂತದಲ್ಲೂ ಪರೀಕ್ಷಿಸಿ ಖಚಿತಪಡಿಸಿಕೊಂಡು ದೃಢೀಕರಿಸಲು ಯೋಜನಾ ನಿರ್ವಹಣಾ ಸಮಾಲೋಚಕರನ್ನು (ಪಿಎಂಸಿ) ನೇಮಿಸಲಾಗಿದ್ದು, ಜೊತೆಗೆ ಸ್ಮಾರ್ಟ್ ಸಿಟಿ ಅಭಿಯಂತರರೂ ಸಹ ಅನುಷ್ಠಾನದ ಪ್ರತಿ ಹಂತದಲ್ಲೂ ಸಹ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು ತಾಂತ್ರಿಕವಾಗಿ ದೃಢೀಕರಿಸಿರುತ್ತಾರೆ. |
| ಈ) | ಮಂಗಳೂರಿನಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿ ನಿರ್ಮಿಸಿದ ಫುಟ್ ಪಾತ್ ಚೇಂಬರ್‌ಗಳು ಕುಸಿಯುತ್ತಿರುವುದು ಪಾಲಿಕೆ ಗಮನಕ್ಕೆ ಬಂದಿದೆಯೇ? ಅವುಗಳನ್ನು ಯಾವಾಗ ಸರಿಪಡಿಸಲಾಗುವುದು: | ಮಂಗಳೂರಿನಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿ ನಿರ್ಮಿಸಿದ ಫುಟ್ ಪಾತ್ ಚೇಂಬರ್‌ಗಳ ಮುಚ್ಚಳಗಳು ಹಾನಿಗೊಂಡಿರುವುದು ಪಾಲಿಕೆ ಗಮನಕ್ಕೆ ಬಂದಿದ್ದು, ಅವುಗಳನ್ನು ಸರಿಪಡಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗುತ್ತಿದೆ.<br>• ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಮಂಗಳೂರು ನಗರದಲ್ಲಿ ಕೈಗೊಳ್ಳಲಾಗಿರುವ ಫುಟ್‌ಪಾತ್ ಮೇಲೆ ಚೇಂಬರ್ ಹಾಗೂ ಅದರ ಮೇಲೆ Fiber Reinforced Polymer (FRP) cover ಒದಗಿಸಲಾಗಿದ್ದು, ಇದು ಕೇವಲ ಪಾದಚಾರಿಗಳ ತೂಕದ ಧಾರಣೆಗೆ ವಿನ್ಯಾಸ ಮಾಡಲಾಗಿದೆ. |

| | | |
|---|---|---|
| | | • ಆದರೆ ಕೆಲವು ಫುಟ್‌ಪಾತ್ ಚೇಂಬರ್‌ಗಳ ಮೇಲೆ ಅನಧಿಕೃತವಾಗಿ ವಾಹನಗಳನ್ನು ಚಲಾಯಿಸಿದ್ದರಿಂದ ಕೆಲವು ಚೇಂಬರ್ ಕವರ್ ಕುಸಿದಿದ್ದು, ಈ ಜಾಗದಲ್ಲಿ ಹೆಚ್ಚಿನ ಧಾರಣಾ ಸಾಮರ್ಥ್ಯದ ಚೇಂಬರ್ ಕವರ್‌ಗಳನ್ನು ಒದಗಿಸಲಾಗಿದೆ. ಇದರ ಹೊರತಾಗಿ ಭಾರೀ ವಾಹನಗಳ ಒಡಾಟವಿರುವ ಬಂದರ್ ವಾರ್ಡ್ ನಲ್ಲಿ ಉಕ್ಕಿನ ಚೇಂಬರ್ ಕವರ್‌ಗಳನ್ನು ಕೂಡ ಒದಗಿಸಲಾಗಿದೆ. |
| ಊ) | ಸದರಿ ನಗರವ್ಯಾಪ್ತಿಯಲ್ಲಿ ವಸತಿಗೃಹಗಳು ಮತ್ತು ಅಪಾಟ್ ಮೆಂಟ್ ದ್ರುವತ್ಯಾಜ್ಯ ಘಟಕವನ್ನು (ಎಸ್.ಡಿ.ಪಿ.ಟಿ.) ನಿರ್ಮಿಸಿರುವುದಾಗಿ ಘೋಷಿಸಿ ಕರ ವಿನಾಯಿತಿ ಪಡೆದ ಪ್ರಸ್ತುತ ತ್ಯಾಜ್ಯ ಘಟಕಗಳು ನಿರ್ವಹಿಸುವುದಿಲ್ಲದಿರುವುದು ಪಾಲಿಕೆಯ ಗಮನಕ್ಕೆ ಬಂದಿದೆಯೇ; ಅವುಗಳನ್ನು ಪರಿಪೂರ್ಣವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಪಾಲಿಕೆ ಯಾವ ಕ್ರಮವಹಿಸಿದೆ? | **ಸ್ವಚ್ಛ್ ಭಾರತ್ ಮಿಷನ್:**<br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಸತಿ ಗೃಹ/ಅಪಾರ್ಟ್‌ಮೆಂಟ್ ನಲ್ಲಿ ದ್ರುವತ್ಯಾಜ್ಯ ಘಟಕವನ್ನು ನಿರ್ಮಿಸುವವರಿಗೆ ಯಾವುದೇ ರೀತಿಯ ಕರ ವಿನಾಯಿತಿ ನೀಡಲಾಗುತ್ತಿರುವುದಿಲ್ಲ. |

**ಸಂಖ್ಯೆ: ನಅಇ 240 ಎಂಎನ್‌ಇ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 235ಕ್ಕೆ ಉತ್ತರ

| ಕ್ರ.ಸಂ. | ಜಿಲ್ಲೆಯ ಹೆಸರು | ಮಹಾನಗರ ಪಾಲಿಕೆಯ ಹೆಸರು | ಶೌಚಾಲಯಗಳ ಸಂಖ್ಯೆ | | ಸದರಿ ಶೌಚಾಲಯಗಳು ಸಾರ್ವಜನಿಕ ಉಪಯೋಗಕ್ಕೆ ಮುಕ್ತವಾಗಿವೆಯೇ? |
|---|---|---|---|---|---|
| | | | ಸಾರ್ವಜನಿಕ ಶೌಚಾಲಯ | ಮಹತ್ವಾಕಾಂಕ್ಷೆ ಶೌಚಾಲಯ | |
| 1 | ತುಮಕೂರು | ತುಮಕೂರು | 15 | 1 | ಹೌದು |
| 2 | ಶಿವಮೊಗ್ಗ | ಶಿವಮೊಗ್ಗ | 41 | 1 | ಹೌದು |
| 3 | ಮೈಸೂರು | ಮೈಸೂರು | 59 | 1 | ಹೌದು |
| 4 | ದಾವಣಗೆರೆ | ದಾವಣಗೆರೆ | 29 | 4 | ಹೌದು |
| 5 | ವಿಜಯಪುರ | ವಿಜಯಪುರ | 31 | 1 | ಹೌದು |
| 6 | ಧಾರವಾಡ | ಹುಬ್ಬಳ್ಳಿ-ಧಾರವಾಡ | 34 | 10 | ಹೌದು |
| 7 | ಬೆಳಗಾವಿ | ಬೆಳಗಾವಿ | 26 | 1 | ಹೌದು |
| 8 | ರಾಯಚೂರು | ರಾಯಚೂರು | 56 | 10 | ಹೌದು |
| 9 | ಕಲಬುರಗಿ | ಕಲಬುರಗಿ | 26 | 8 | ಹೌದು |
| 10 | ಬಳ್ಳಾರಿ | ಬಳ್ಳಾರಿ | 20 | 10 | ಹೌದು |
| 11 | ದಕ್ಷಿಣ ಕನ್ನಡ | ಮಂಗಳೂರು | 39 | 1 | ಹೌದು |
| | ಒಟ್ಟು | | 376 | 48 | |

ಸಹಾಯಕ ನಿರ್ದೇಶಕರು(ಎಸ್.ಬಿ.ಎಂ)
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು

LCQ 235

ಅನುಬಂಧ — ೨

**ಶ್ರೀ ಮಂಜುನಾಥ್ ಭಂಡಾರಿ ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 235ಕ್ಕೆ ಉತ್ತರ ಸಲ್ಲಿಸುವ ಬಗ್ಗೆ**

| ಕ್ರ. ಸಂ | ಮಹಾನಗರಪಾಲಕೆ ಹೆಸರು | ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನ ಸಂಚಾರಕ್ಕೆ ಅನುಗುಣವಾಗಿ ಬಸ್ ತಂಗುದಾಣ ಒದಗಿಸಲು ಕ್ರಮ ವಹಿಸಲಾಗಿದೆಯೇ: | ಕ್ರಮವಹಿಸಿದ್ದಲ್ಲಿ ಸದರಿ ಕಾಮಗಾರಿಗಳಿಗೆ 15ನೇ ಹಣಕಾಸು ಆಯೋಗದಡಿ ಕೈಗೊಳ್ಳಲಾಗಿದೆಯೇ | ಕೈಗೊಂಡಿದ್ದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ ವರದಿ ನೀಡುವುದು |
|---|---|---|---|---|
| 1 | ದಾವಣಗೆರೆ | ಸ್ಮಾರ್ಟ ಸಿಟಿ ವತಿಯಿಂದ ಈಗಾಗಲೇ 104 ಸಂಖ್ಯೆ ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿರುತ್ತದೆ. ಪಿಪಿಪಿ ಮಾಡೆಲ್ ನಲ್ಲಿ ಹೆಚ್ಚುವರಿ ಬಸ್ ತಂಗುದಾಣ ನಿರ್ಮಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. | ಇಲ್ಲ | ರೂ.6.03 ಕೋಟಿ (ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳಲಾಗಿರುತ್ತದೆ.) |
| 2 | ಶಿವಮೊಗ್ಗ | ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಮಾರ್ಟ ಸಿಟಿ ವತಿಯಿಂದ ಒಟ್ಟು 108 ಬಸ್ ತಂಗುದಾಣಗಳನ್ನು ನಿರ್ಮಿಸಿ ಪಾಲಿಕೆಗೆ ಹಸ್ತಾಂತರಿಸಲಾಗಿದೆ. | ಇಲ್ಲ | ಇಲ್ಲ |
| 3 | ತುಮಕೂರು | ತುಮಕೂರು ಮಹಾನಗರ ವ್ಯಾಪ್ತಿಯಲ್ಲಿ ತುಮಕೂರು ಸ್ಮಾರ್ಟ್ ಸಿಟಿ ಇಲಾಖೆಯಿಂದ 2025-26 ಸಾಲಿನಲ್ಲಿ ನಗರದ 14 ಸ್ಥಳಗಳಲ್ಲಿ (ಅಂದಾಜು ಮೊತ್ತ 1.54 ಕೋಟಿ) ಹೊಸದಾಗಿ ಬಸ್ ತಂಗುದಾಣಗಳನ್ನು ನಿರ್ಮಿಸಲು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. | ಇಲ್ಲ | ಇಲ್ಲ |
| 4 | ಮಂಗಳೂರು | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇ ಟೆಂಡರ್ ಮೂಲಕ ವಿವಿಧ ಜಾಹೀರಾತು ಸಂಸ್ಥೆಗಳಿಂದ BOT ಆಧಾರದಲ್ಲಿ ಬಸ್ಸು ತಂಗುದಾಣಗಳನ್ನು ನಿರ್ಮಿಸಲಾಗುತ್ತಿದೆ. | ಇಲ್ಲ | ಇಲ್ಲ |
| 5 | ಮೈಸೂರು | ಇಲ್ಲ | ಇಲ್ಲ | ಇಲ್ಲ |
| 6 | ಬೆಳಗಾವಿ | 1. ಸ್ಮಾರ್ಟ ಸಿಟಿ ವತಿಯಿಂದ ಈಗಾಗಲೇ ಒಟ್ಟು 38 ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿರುತ್ತದೆ.<br>2. ಸ್ಮಾರ್ಟ ಸಿಟಿ ವತಿಯಿಂದ ಬಸ್ ಟರ್ಮಿನಲ್ ನಿರ್ಮಿಸಲಾಗಿರುತ್ತದೆ. | ಇಲ್ಲ | 1. ರೂ.7.38 ಕೋಟಿ (ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳಲಾಗಿರುತ್ತದೆ.)<br>2. ರೂ. 44.11 ಕೋಟಿ (ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳಲಾಗಿರುತ್ತದೆ.) |

| ಕ್ರ. ಸಂ | ಮಹಾನಗರಪಾಲಕೆ ಹೆಸರು | ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನ ಸಂಚಾರಕ್ಕೆ ಅನುಗುಣವಾಗಿ ಬಸ್ ತಂಗುದಾಣ ಒದಗಿಸಲು ಕ್ರಮ ವಹಿಸಲಾಗಿದೆಯೇ: | ಕ್ರಮವಹಿಸಿದ್ದಲ್ಲಿ ಸದರಿ ಕಾಮಗಾರಿಗಳಿಗೆ 15ನೇ ಹಣಕಾಸು ಆಯೋಗದಡಿ ಕೈಗೊಳ್ಳಲಾಗಿದೆಯೇ | ಕೈಗೊಂಡಿದ್ದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ ವರದಿ ನೀಡುವುದು |
|---|---|---|---|---|
| 7 | ಹುಬ್ಬಳ್ಳಿ-ಧಾರವಾಡ | ಹೌದು. 2024 -25 ವಾರ್ಡ್ ಸಂಖ್ಯೆ 18 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಹನುಮಂತ ನಗರ ಪ್ರದೇಶ, ಹೊಯ್ಸಳ ನಗರ ಪ್ರದೇಶ, ಕಲ್ಯಾಣ ನಗರ ಪ್ರದೇಶ ಮತ್ತು ಶಾಂತಿ ಸದನ ಶಾಲೆಯ ಬಳಿ ಮತ್ತು ಹನುಮಂತ ನಗರ ಶಾಲ್ಮಲಾ ಶಾಲೆಯ ಬಳಿ ಬಸ್ ನಿಲ್ದಾಣ ನಿರ್ಮಾಣ. | 15ನೇ ಹಣಕಾಸು ಆಯೋಗದ ಮುಕ್ತ ಮೂಲ ಅನುದಾನಗಳು 2024 -25 30 ಲಕ್ಷಗಳು | ಕಾಮಗಾರಿ ಪ್ರಗತಿಯಲ್ಲಿದೆ |
| 8 | ವಿಜಯಪುರ | ಇಲ್ಲ | ಇಲ್ಲ | ಇಲ್ಲ |
| 9 | ಬಳ್ಳಾರಿ | ಬಳ್ಳಾರಿ ಮಹಾನಗರ ಪಾಲಿಕೆಯ 2021-22 ನೇ ಸಾಲಿನ 15ನೇ ಹಣಕಾಸು ಯೋಜನ ಅನುದಾನದಲ್ಲಿ ಹಾಲಿ ಇರುವ 09 ಬಸ್ ಶೆಲ್ಟರಗಳನ್ನು ಉನ್ನತಿಕರಿಸಲಾಗಿದೆ. 2022-23 15 ನೇ ಸಾಲಿನ 15ನೇ ಹಣಕಾಸು ಯೋಜನೆ ಅನುದಾನದಲ್ಲಿ 08 ಬಸ್ ಶೆಲ್ಟರಗಳನ್ನು ಉನ್ನತಿಕರಿಸಲಾಗಿದೆ. | ಹೌದು | 15ನೇ ಹಣಕಾಸು ಆಯೋಗದ ಬಿಡುಗಡೆಯಾದ ಮುಕ್ತ ಮೂಲ ಅನುದಾನಗಳು 2021 -22 ರೂ.10 ಲಕ್ಷಗಳು ಮತ್ತು 15ನೇ ಹಣಕಾಸು ಆಯೋಗದ ಬಿಡುಗಡೆಯಾದ ಮುಕ್ತ ಮೂಲ ಅನುದಾನಗಳು 2022 -23 ರೂ.24 ಲಕ್ಷಗಳು, |
| 10 | ಕಲಬುರಗಿ | ಇಲ್ಲ | ಇಲ್ಲ | ಇಲ್ಲ |
| 11 | ಬೀದರ್ | ಬೀದರ್ ನಗರದಾದ್ಯಂತ ಎಲ್ಲಾ ನಗರ ಬಸ್ ನಿಲ್ದಾಣಗಳ ನವೀಕರಣ :<br>ಅ. ಚಿದ್ರಿ ವೃತ್ತ<br>ಆ. ಪಾಪ್ನಾಶ್ ಗೇಟ್ ಬಳಿಯ ಹೊಸ ವಿಜಯ ಲಕ್ಷ್ಮಿ<br>ಇ. ಬ್ರಿಮ್ಸ್ ಆಸ್ಪತ್ರೆ<br>ಈ. ಜನವಾಡಾ ರಸ್ತೆಯಲ್ಲಿರುವ ಎಸ್.ಆರ್<br>ಉ. ನಯಾ ಕಮಾನ್ | ಹೌದು | 15ನೇ ಹಣಕಾಸು ಆಯೋಗದ (ಸಾಮಾನ್ಯ ಮೂಲ ಅನುದಾನ) 2024-25 ರ ಅಡಿಯಲ್ಲಿ ಪ್ರಸ್ತಾಪಿಸಲಾದ ಕೆಲಸಗಳು ರೂ. 20.88 ಲಕ್ಷಗಳ ಅಂದಾಜು ಮೊತ್ತದ ಕೆಲಸ ಪ್ರಗತಿಯಲ್ಲಿದೆ |
| 12 | ರಾಯಚೂರು | ಇಲ್ಲ | ಇಲ್ಲ | ಇಲ್ಲ |
| 13 | ಹಾಸನ | ಇಲ್ಲ | ಇಲ್ಲ | ಇಲ್ಲ |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಅನುಬಂಧ-3

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 235ಕ್ಕೆ ಉತ್ತರ

ಜಿಲ್ಲೆಯ ಹೆಸರು: ದಕ್ಷಿಣ ಕನ್ನಡ

ಮಂಗಳೂರು ಮಹಾನಗರ ಪಾಲಿಕೆ

| ಕ್ರ.ಸಂ. | ಶೌಚಾಲಯಗಳು | | ಸಾರ್ವಜನಿಕ ಶೌಚಾಲಯಗಳ ಅಂತರ | ಸದರಿ ಶೌಚಾಲಯ ಸಾರ್ವಜನಿಕ ಉಪಯೋಗಕ್ಕೆ ಮುಕ್ತವಾಗಿವೆಯೇ? |
|---|---|---|---|---|
| | ಸಾರ್ವಜನಿಕ ಶೌಚಾಲಯದ ಸ್ಥಳ | ಮಹತ್ವಾಕಾಂಕ್ಷೆ ಶೌಚಾಲಯದ ಸ್ಥಳ | | |
| 1 | ಸುರತ್ಕಲ್ ಬೀಚ್ ರೋಡ್.ಲೈಟ್ ಹೌಸ್ | ಸ್ಟೇಟ್ ಬ್ಯಾಂಕ್, ಸರ್ವಿಸ್ ಬಸ್ ಸ್ಟ್ಯಾಂಡ್ ಒಳಗಡೆ | | ಹೌದು |
| 2 | ಕಾಟಿಪಳ್ಳ, ಗಣೇಶ್ ಪುರ, ಕೈಕಂಬ ಸರ್ಕಲ್. | | | ಹೌದು |
| 3 | ಯುವಕ ಮಂಡಲ,ಕೃಷ್ಣಾಪುರ | | | ಹೌದು |
| 4 | 4th block ಕೃಷ್ಣಾಪುರ, ಸರ್ಕಾರಿ ಶಾಲೆ ಹತ್ತಿರ. | | | ಹೌದು |
| 5 | ಕಾನ, ಎಮ್.ಆರ್.ಪಿ.ಎಲ್ ರಸ್ತೆ, ಸುರತ್ಕಲ್, ಮಾರುಕಟ್ಟೆ ಎದುರುಗಡೆ. | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 6 | ಉಡುಪಿ ಸರ್ವಿಸ್ ಬಸ್ ನಿಲ್ದಾಣ, ಸುರತ್ಕಲ್ | | | ಹೌದು |
| 7 | ಗೋವಿಂದಾ ಕಾಲೇಜು ಹತ್ತಿರ, ಸುರತ್ಕಲ್ | | | ಹೌದು |
| 8 | ಮುಡಾ ಮಾರುಕಟ್ಟೆ, ಸುರತ್ಕಲ್ | | | ಹೌದು |
| 9 | ಸುರತ್ಕಲ್ ಮಾರುಕಟ್ಟೆ, ಸುರತ್ಕಲ್ | | | ಹೌದು |
| 10 | ಕುಳಾಯಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಹತ್ತಿರ. | | | ಹೌದು |
| 11 | ಬೈಕಂಪಾಡಿ ಸರ್ಕಲ್, APMC ಹತ್ತಿರ. | | | ಹೌದು |
| 12 | ಮೀನಾಕಳಿಯಾ, ಸುರತ್ಕಲ್ | | | ಹೌದು |
| 13 | ಕುಳೂರು, ಬಸ್ ನಿಲ್ದಾಣ. | | | ಹೌದು |
| 14 | ಬೊಂದೆಲ್ ಜಂಕ್ಷನ್ ಬಳಿ | | | ಹೌದು |
| 15 | ವಾಮಂಜೂರು ಜಂಕ್ಷನ್. | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 16 | ಉರ್ವ ಮಾರುಕಟ್ಟೆ. | | | ಹೌದು |
| 17 | ಉರ್ವ ಮೈದಾನ | | | ಹೌದು |
| 18 | ಬಿಜೈ ಮಾರುಕಟ್ಟೆ, 57504 | | | ಹೌದು |
| 19 | ಕೆ.ಎಸ್.ಆರ್.ಟಿ.ಸಿ, ಬಸ್ ನಿಲ್ದಾಣ. | | | ಹೌದು |
| 20 | ಕದ್ರಿ ಪಾರ್ಕ್, ಡಿಂಕಿ ಡೈನ್ ಹೋಟೇಲ್ ಹತ್ತಿರ | | | ಹೌದು |
| 21 | ಕದ್ರಿ ಮೈದಾನದ ಬಳಿ | | ಸಾರ್ವಜನಿಕ ಶೌಚಾಲಯಗಳು 2 ರಿಂದ 3 ಕಿಲೋ ಮೀಟರ್ ಗಳ ಅಂತರದಲ್ಲಿದೆ ಹಾಗೂ ಪೆಟ್ರೋಲ್ ಬಂಕ್ ಗಳ ಶೌಚಾಲಯಗಳು ಸಾರ್ವಜನಿಕರಿಗೆ ಲಭ್ಯವಿರುತ್ತದೆ. | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 22 | ಕಂಕನಾಡಿ ಮಾರುಕಟ್ಟೆ ಬಳಿ | | | ಹೌದು |
| 23 | ವೆನ್ಲಾಕ್ ಆಸ್ಪತ್ರೆ ಕ್ಯಾಂಪಸ್, ಆಟೋ ಸ್ಟ್ಯಾಂಡ್ ಎದುರುಗಡೆ. | | | ಹೌದು |
| 24 | ಜ್ಯೋತಿ ಶಾಲೆಯ ಬಸ್ ಸ್ಟ್ಯಾಂಡ್ ಬಳಿ | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 25 | ಹಳೆ ಬಸ್ ಸ್ಟ್ಯಾಂಡ್, ಹಂಪನಕಟ್ಟೆ. | | | ಹೌದು |
| 26 | ಠಾಗೋರ್ ಪಾರ್ಕ್, ಬಾವುಟಗುಡ್ಡೆ, ಕೆ.ಎಮ್.ಸಿ ಮರ್ಕೇರಾ ಟ್ರಾಕ್ ರೋಡ್, ಹಂಪನಕಟ್ಟೆ. | | | ಹೌದು |
| 27 | ಕೈಬಾರ್ ಪಾಸ್, ಪಿ.ವಿ.ಎಸ್ ಜಂಕ್ಷನ್ ಹತ್ತಿರ. | | | ಹೌದು |
| 28 | ಗಾಡಿ ಚೌಕ್,ಹಂಪನಕಟ್ಟೆ. | | | ಹೌದು |
| 29 | ಅಳಕೆ ಮಾರುಕಟ್ಟೆ, ಅಳಕೆ | | | ಇಲ್ಲ |
| 30 | ಹೂವಿನ ಮಾರುಕಟ್ಟೆ, ಕಾರ್ ಸ್ಟ್ರೀಟ್ 575003 | | | ಹೌದು |
| 31 | ಪೋರ್ಟ್ ಮೀನಿನ ಮಾರುಕಟ್ಟೆ, ಬಂದರು | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 32 | ಸರ್ವಿಸ್ ಬಸ್ ನಿಲ್ದಾಣ, ಪಾಂಡೇಶ್ವರ | | | ಹೌದು |
| 33 | ಟೆಂಪೋ ಪಾರ್ಕ್, ಟೌನ್ ಹಾಲ್ ಹಿಂಬದಿ, ಪಾಂಡೇಶ್ವರ | | | ಹೌದು |
| 34 | ಮೀನಿನ ಮಾರುಕಟ್ಟೆ ಹಿಂಬದಿ, ಸ್ಟೇಟ್ ಬ್ಯಾಂಕ್ | | | ಹೌದು |
| 35 | ಪಂಪ್ ವೆಲ್ ಜಂಕ್ಷನ್ ಬಳಿ | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 36 | ಮರೋಳಿ, ಕೆ.ಇ.ಬಿ ಹತ್ತಿರ | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 37 | ಪಡೀಲ್ ಜಂಕ್ಷನ್ | | | ಹೌದು |
| 38 | ಬಸ್ ನಿಲ್ದಾಣ.ಮಂಗಳಾದೇವಿ ದೇವಸ್ಥಾನ ಹತ್ತಿರ-575001 | | | ಹೌದು |
| 39 | ಜೆಪ್ಪು ಮಾರುಕಟ್ಟೆ, ಮಂಗಳಾ ಪಾರ್ಕ್ ಹತ್ತಿರ, ಬೋಳಾರ 575001 | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |

ಸಹಾಯಕ ನಿರ್ದೇಶಕರು(ಎಸ್.ಬಿ.ಎಂ)
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು

ISFC ANNX

ಅನುಬಂಧ -04

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 235ಕ್ಕೆ ಉತ್ತರಿಸುವ ಕುರಿತು.

| ಜಿಲ್ಲೆಯ ಹೆಸರು: ದಕ್ಷಿಣ ಕನ್ನಡ | | | ಮಂಗಳೂರು ಮಹಾನಗರ ಪಾಲಿಕೆ | |
|---|---|---|---|---|
| ಕ್ರ.ಸಂ. | ಶೌಚಾಲಯಗಳು | | ಸಾರ್ವಜನಿಕ ಶೌಚಾಲಯಗಳ ಅಂತರ | ಸದರಿ ಶೌಚಾಲಯ ಸಾರ್ವಜನಿಕ ಉಪಯೋಗಕ್ಕೆ ಮುಕ್ತವಾಗಿವೆಯೇ? |
| | ಸಾರ್ವಜನಿಕ ಶೌಚಾಲಯದ ಸ್ಥಳ | ಮಹತ್ವಾಕಾಂಕ್ಷಿ ಶೌಚಾಲಯದ ಸ್ಥಳ | | |
| 1 | ಸುರತ್ಕಲ್ ಬೀಚ್ ರೋಡ್.ಲೈಟ್ ಹೌಸ್ | | | ಹೌದು |
| 2 | ಕಾಟಿಪಳ್ಳ, ಗಣೇಶ್ ಪುರ, ಕೈಕಂಬ ಸರ್ಕಲ್. | | | ಹೌದು |
| 3 | ಯುವಕ ಮಂಡಲ.ಕೃಷ್ಣಾಪುರ | | | ಹೌದು |
| 4 | 4th block ಕೃಷ್ಣಾಪುರ, ಸರ್ಕಾರಿ ಶಾಲೆ ಹತ್ತಿರ. | | | ಹೌದು |
| 5 | ಕಾನ, ಎಮ್.ಆರ್.ಪಿ.ಎಲ್ ರಸ್ತೆ, ಸುರತ್ಕಲ್, ಮಾರುಕಟ್ಟೆ ಎದುರುಗಡೆ. | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 6 | ಉಡುಪಿ ಸರ್ವಿಸ್ ಬಸ್ ನಿಲ್ದಾಣ, ಸುರತ್ಕಲ್ | | | ಹೌದು |
| 7 | ಗೋವಿಂದಾ ಕಾಲೇಜು ಹತ್ತಿರ, ಸುರತ್ಕಲ್ | | | ಹೌದು |
| 8 | ಮುಡಾ ಮಾರುಕಟ್ಟೆ, ಸುರತ್ಕಲ್ | | | ಹೌದು |
| 9 | ಸುರತ್ಕಲ್ ಮಾರುಕಟ್ಟೆ, ಸುರತ್ಕಲ್ | | | ಹೌದು |
| 10 | ಕುಳಾಯಿ, ಪ್ರಾಥಮಿಕ ಆರೋಗ್ಯ ಕೇಂದ್ರದ ಹತ್ತಿರ. | | | ಹೌದು |
| 11 | ಬೈಕಂಪಾಡಿ ಸರ್ಕಲ್, APMC ಹತ್ತಿರ. | | | ಹೌದು |
| 12 | ಮೀನಾಕಳಿಯಾ, ಸುರತ್ಕಲ್ | | | ಹೌದು |
| 13 | ಕುಳೂರು, ಬಸ್ ನಿಲ್ದಾಣ. | | | ಹೌದು |
| 14 | ಬೊಂದೆಲ್ ಜಂಕ್ಷನ್ ಬಳಿ | | | ಹೌದು |
| 15 | ವಾಮಂಜೂರು ಜಂಕ್ಷನ್. | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |

| | | | | |
|---|---|---|---|---|
| 16 | ಉರ್ವ ಮಾರುಕಟ್ಟೆ. | | | ಹೌದು |
| 17 | ಉರ್ವ ಮೈದಾನ | | | ಹೌದು |
| 18 | ಬಿಜೈ ಮಾರುಕಟ್ಟೆ, 57504 | | | ಹೌದು |
| 19 | ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ. | | | ಹೌದು |
| 20 | ಕದ್ರಿ ಪಾರ್ಕ್, ಡಿಂಕಿ ಡೈನ್ ಹೋಟೇಲ್ ಹತ್ತಿರ | | ಸಾರ್ವಜನಿಕ ಶೌಚಾಲಯಗಳು 2 ರಿಂದ 3 ಕಿಲೋ ಮೀಟರ್ ಗಳ ಅಂತರದಲ್ಲಿದೆ ಹಾಗೂ ಪೆಟ್ರೋಲ್ ಬಂಕ್ ಗಳ ಶೌಚಾಲಯಗಳು ಸಾರ್ವಜನಿಕರಿಗ ಲಭ್ಯವಿರುತ್ತದೆ. | ಹೌದು |
| 21 | ಕದ್ರಿ ಮೈದಾನದ ಬಳಿ | | | ಇಲ್ಲ (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 22 | ಕಂಕನಾಡಿ ಮಾರುಕಟ್ಟೆ ಬಳಿ | | | ಹೌದು |
| 23 | ವೆನ್ಲಾಕ್ ಆಸ್ಪತ್ರೆ ಕ್ಯಾಂಪಸ್, ಆಟೋ ಸ್ಟ್ಯಾಂಡ್ ಎದುರುಗಡೆ. | | | ಹೌದು |
| 24 | ಜ್ಯೋತಿ ಶಾಲೆಯ ಬಸ್ ಸ್ಟ್ಯಾಂಡ್ ಬಳಿ | | | ಇಲ್ಲ (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 25 | ಹಳೆ ಬಸ್ ಸ್ಟ್ಯಾಂಡ್, ಹಂಪನಕಟ್ಟೆ. | | | ಹೌದು |
| 26 | ಠಾಗೋರ್ ಪಾರ್ಕ್, ಬಾವುಟಗುಡ್ಡೆ, ಕೆ.ಎಮ್.ಸಿ ಮರ್ಕೆರಾ ಟ್ರಾಕ್ ರೋಡ್, ಹಂಪನಕಟ್ಟೆ. | | | ಹೌದು |
| 27 | ಕೈಬಾರ್ ಪಾಸ್, ಪಿ.ವಿ.ಎಸ್ ಜಂಕ್ಷನ್ ಹತ್ತಿರ. | | | ಹೌದು |
| 28 | ಗಾಡಿ ಚೌಕ್,ಹಂಪನಕಟ್ಟೆ. | | | ಹೌದು |
| 29 | ಅಳಕೆ ಮಾರುಕಟ್ಟೆ ಅಳಕೆ | | | ಇಲ್ಲ |
| 30 | ಹೂವಿನ ಮಾರುಕಟ್ಟೆ, ಕಾರ್ ಸ್ಟ್ರೀಟ್ 575003 | | | ಹೌದು |
| 31 | ಪೋರ್ಟ್ ಮೀನಿನ ಮಾರುಕಟ್ಟೆ, ಬಂದರು | | | ಇಲ್ಲ (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 32 | ಸರ್ವಿಸ್ ಬಸ್ ನಿಲ್ದಾಣ, ಪಾಂಡೇಶ್ವರ | | | ಹೌದು |

| | | | | |
|---|---|---|---|---|
| 33 | ಟೆಂಪ್ಲೋ ಪಾರ್ಕ್, ಟೌನ್ ಹಾಲ್ ಹಿಂಬದಿ, ಪಾಂಡೇಶ್ವರ | | | ಹೌದು |
| 34 | ಮೀನಿನ ಮಾರುಕಟ್ಟೆ ಹಿಂಬದಿ, ಸ್ಟೇಟ್ ಬ್ಯಾಂಕ್ | | | ಹೌದು |
| 35 | - | ಸ್ಟೇಟ್ ಬ್ಯಾಂಕ್, ಸರ್ವಿಸ್ ಬಸ್ ಸ್ಟ್ಯಾಂಡ್ ಒಳಗಡೆ | | ಹೌದು |
| 36 | ಪಂಪ್ ವೆಲ್ ಜಂಕ್ಷನ್ ಬಳಿ | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 37 | ಮರೋಳಿ, ಕ.ಇ.ಬಿ ಹತ್ತಿರ | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |
| 38 | ಪಡೀಲ್ ಜಂಕ್ಷನ್ | | | ಹೌದು |
| 39 | ಬಸ್ ನಿಲ್ದಾಣ.ಮಂಗಳಾದೇವಿ ದೇವಸ್ಥಾನ ಹತ್ತಿರ-575001 | | | ಹೌದು |
| 40 | ಜೆಪ್ಪು ಮಾರುಕಟ್ಟೆ, ಮಂಗಳಾ ಪಾರ್ಕ್ ಹತ್ತಿರ, ಬೋಳಾರ 575001 | | | ಇಲ್ಲ. (ಟೆಂಡರ್ ಕರೆದು ನಿರ್ವಹಣೆ ಮಾಡಲಾಗುವುದು) |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು